ಈ ಬಗ್ಗೆ ಮೇಲ್ಕಂಡ ಅವಧಿಯೊಳಗೆ ಬರುವ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಶೀಲನೆಗಾಗಿ ತೆಗೆದುಕೊಳ್ಳುತ್ತದೆ. ಆಕ್ಷೇಪಣೆ ಮತ್ತು ಸಲಹೆಗಳಿದ್ದಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಕೊಠಡಿ ಸಂಖ್ಯೆ: 414, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು–560 001 ಇವರಿಗೆ ಕಳುಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**PR – 474**
**SC – 50**

**ಎಂ.ಕೆ. ಭರ್ಮರಾಜಪ್ಪ**
ಸರ್ಕಾರದ ಅಪರ ಕಾರ್ಯದರ್ಶಿ
ಕಾರ್ಮಿಕ ಇಲಾಖೆ,

## ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಇ–ಅಪಜೀ 79 ಎಫ್‌ಡಬ್ಲ್ಯೂಎಲ್ 2019 ಬೆಂಗಳೂರು, ದಿನಾಂಕ; 21–11–2019**

ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ಸೆಕ್ಷನ್ 4(1) (ಬಿಬಿ) ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಶ್ರೀ ಜೀವನ್ ಕೃಷ್ಣಪ್ಪ, # 151, ಎನ್. ಬ್ಲಾಕ್, 4ನೇ ಕ್ರಾಸ್, ಕುವೆಂಪುನಗರ, ಮೈಸೂರು ಇವರನ್ನು ಚಾಮರಾಜನಗರ ಜಿಲ್ಲೆಯ ಗೌರವ ವನ್ಯಜೀವಿ ಪರಿಪಾಲಕರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶವರೆಗೆ ನಾಮನಿರ್ದೇಶನ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**PR – 475**
**SC – 100**

**ಬಿ. ಕಮಲಮ್ಮ**
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
(ಅರಣ್ಯ–ಎ)

## ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಇ–ಅಪಜೀ 78 ಎಫ್‌ಡಬ್ಲ್ಯೂಎಲ್ 2019 ಬೆಂಗಳೂರು, ದಿನಾಂಕ; 31–10–2019**

ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ಸೆಕ್ಷನ್ 4(1) (ಬಿಬಿ) ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಕುಮಾರಿ ಕೃತಿಕಾ ಆಲನಹಳ್ಳಿ, ಬಿನ್ ಶ್ರೀ ಕೃಷ್ಣಾ ಆಲನಹಳ್ಳಿ, ಇವರನ್ನು ಮೈಸೂರು ಜಿಲ್ಲೆಯ ಗೌರವ ವನ್ಯಜೀವಿ ಪರಿಪಾಲಕರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**PR – 476**
**SC – 100**

**ಬಿ. ಕಮಲಮ್ಮ**
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
(ಅರಣ್ಯ–ಎ)

## LABOUR SECRETARIAT

### NOTIFICATION

**No. LD 372 LET 2014, Bengaluru, Dated: 19-11-2017**

Whereas the draft of the Karnataka Minimum Wages (Amendment) Rules, 2016 was published as required by sub-section (1) of the section 30 of the Minimum Wages Act, 1948 (Central Act No. XI of 1948), in notification No: LD 372 LET 2014, dated 4/11/2016 in part IV-A of the Karnataka Gazette dated 19/09/2019 inviting objection and suggestions from all the persons likely to be affected within thirty days from the date of its publication in the Official Gazette.

Whereas, the said Gazette was made available to the public on 19/09/2019.

And whereas, no objection and suggestions have been received by the State Government.

Now, therefore the Government of Karnataka hereby makes the following rules, namely;

**RULES**

1. **Title and commencement:- (**1) These rules may be called the Karnataka Minimum Wages (Amendment) Rules, 2016.
(2) They shall come into force from the date of their final publication in the Official Gazette.

2. **Amendment of rule 35:-** In the Karnataka Minimum Wages Rules, 1958, (hereinafter referred to as the said rules). in rule 35, in sub-rule (2), in item (iii),-
   (i) for the words "Pleader's fees", the words "Legal practitioner's fee" shall be substituted;
   (ii) for the letters and figure "Rs. 10", the word and figure "rupees 300" shall substituted;

(iii) for the words “five rupees”, the words” one hundred and fifty rupees” shall be substituted; and

(iv) for the words “twenty-five rupees”, the words “five hundred rupees” shall be substituted;

3. **Amendment of rule 36.-** In rule 36 of the said rules,-

(i) In item (i), for the words “one rupee”, the words “ten rupees” shall be substituted; and

(ii) In item (ii), for the words, “one rupee”, the words “ten rupees” shall be substituted.

By Order and in the Name of the Governor of Karnataka

**PR – 477**
**SC – 150**

**M.K. BHARMARAJAPPA**
Additional Secretary to Government
Labour Department

## ಕಾರ್ಮಿಕ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಕಾಇ 246 ಎಲ್‌ಡಬ್ಲ್ಯೂಎ 2018, ಬೆಂಗಳೂರು, ದಿನಾಂಕ: 20-11-2019**

ಕರ್ನಾಟಕ ರಾಜ್ಯಾದ್ಯಂತ **“ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಉದ್ಯೋಗ”** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲುದ್ದೇಶಿಸಿ, ರಾಜ್ಯ ಸರ್ಕಾರವು ತನಗೆ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 5 (1)(ಬಿ) ರ ಪ್ರಾವಧಾನದನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರಡು ಅಧಿಸೂಚನೆಯನ್ನು ಸಂಖ್ಯೆ: **ಕಾಇ 246 ಎಲ್‌ಡಬ್ಲ್ಯೂಎ 2018, ಬೆಂಗಳೂರು ದಿನಾಂಕ: 04-02-2018** ರಂದು ಪ್ರಕಟಿಸಿರುತ್ತದೆ ಹಾಗೂ ತನ್ಮೂಲಕ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳು ಹಾಗೂ ಅವರನ್ನು ಪ್ರತಿನಿಧಿಸುವ ಸಂಘ-ಸಂಸ್ಥೆಗಳ ಗಮನಕ್ಕೆ ವಿಷಯವನ್ನು ರಾಜ್ಯ ಸರ್ಕಾರವು ತಂದಿರುತ್ತದೆ. ರಾಜ್ಯ ಸರ್ಕಾರವು ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು (02) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಸದರಿ ಅವಧಿಯಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಹಲವು ನಿರ್ದಿಷ್ಟವಾದ ಹಾಗೂ ಸಾಮಾನ್ಯವಾದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಂಬಂಧಿಸಿದವರಿಂದ ರಾಜ್ಯ ಸರ್ಕಾರವು ಸ್ವೀಕರಿಸಿರುತ್ತದೆ.

ಸದರಿ ಕರಡು ಅಧಿಸೂಚನೆ ಬಗ್ಗೆ ಸಲಹೆಗಳನ್ನು ನೀಡುವ ಸಲುವಾಗಿ ದಿನಾಂಕ: 19-09-2019 ರಂದು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯನ್ನು ಕರೆಯಲಾಗಿದ್ದು, ನಿಯಮಾನುಸಾರ ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಸಭೆಯಲ್ಲಿ ಮೇಲ್ಕಂಡ ಕರಡು ಅಧಿಸೂಚನೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಲಾದ ಸಲಹೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಮಂಡಳಿಯು ತನ್ನ ಚರ್ಚೆಗಳು ಹಾಗೂ ಸಲಹೆಗಳುಳ್ಳ ನಡವಳಿಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುತ್ತದೆ.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯು ದಿನಾಂಕ: 19-09-2019 ರ ಸಭೆಯಲ್ಲಿ ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ತನಗೆ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 3(1)(ಬಿ) ಸಹವಾಚಿತ ಕಲಂ 5 (1)(ಬಿ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ **“ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಉದ್ಯೋಗ”** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಈ **ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಅನ್ವಯವಾಗುವಂತೆ** ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948 ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**ಕನಿಷ್ಠ ವೇತನ ದರಗಳ ಕೋಷ್ಟಕ**

| ಕ್ರಮ ಸಂಖ್ಯೆ | ಕಾರ್ಮಿಕ ವರ್ಗ | ಕನಿಷ್ಠ ವೇತನ (ದಿನವೊಂದಕ್ಕೆ) (ರೂ.ಗಳಲ್ಲಿ) | ಕನಿಷ್ಠ ವೇತನ (ತಿಂಗಳಿಗೆ) (ರೂ.ಗಳಲ್ಲಿ) |
|---|---|---|---|
| I | 1) ಗಾರ್ಬ್ಲರ್ಸ್<br>2) ಗ್ರೇಡರ್ಸ್<br>3) ಜನರಲ್ ಯಾರ್ಡ್ ವರ್ಕರ್ಸ್ | 406.80 | 10576.80 |
| II | ಗಾರ್ಬ್ಲಿಂಗ್ ಶೆಡ್ ಕೆಲಸಗಾರರು ಹಾಗೂ ಮಕ್ಕಳ ಮನೆ (Creche) ಕೆಲಸಗಾರರು | 399.00 | 10374.00 |
| III | **ಕ್ಯಾಂಟೀನ್ ಕೆಲಸಗಾರರು** | | |
| | 1. ಕ್ಯಾಂಟೀನ್ ಮೇಲ್ವಿಚಾರಕರು | 425.00 | 11050.00 |
| | 2. ಅಡಿಗೆ ಭಟ್ಟರು | 418.00 | 10868.00 |
| | 3. ಸಹಾಯಕ ಅಡಿಗೆ ಭಟ್ಟರು / ಪರಿಚಾರಕರು / ಸಪ್ಲೈಯರ್ | 413.00 | 10738.00 |
| | 3. ಕ್ಯಾಂಟೀನ್ ಕ್ಲೀನರ್ಸ್ | 406.00 | 10556.00 |
| IV | **ಯಂತ್ರ ಕೊಠಡಿಯ ಕಾರ್ಮಿಕರು** | | |
| | 1. ಫೋರ್ ಮನ್ (ಮುಂದಾಳು) | 440.69 | 11458.00 |
| | 2. ಸಹಾಯಕ ಫೋರ್ ಮನ್ | 423.26 | 11005.00 |